ದಿನಾಂಕಃ 25.02.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲು ಪಿರ್ಯಾದುದಾರರ ಪರ ವಕೀಲರಿಂದಃ

ನನ್ನ ವಿಳಾಸ ಬಟ್ಟರಮಾರನಹಳ್ಳಿ, ದೇವನಹಳ್ಳಿ ತಾಲ್ಲೂಕು, ಬೂದಿಗೆರೆ ಅಂಚೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ. ವಿವಾದಿತ ಚೆಕ್ಕು ನನ್ನ ಬ್ಯಾಂಕ್ ಖಾತೆಗೆ ಸಂಬಂಧಪಟ್ಟಿರುತ್ತದೆ ಎಂದರೆ ಸರಿ. ವಿವಾದಿತ ಚೆಕ್ಕಿನಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಅದನ್ನು ನಿಪಿ 1ಎ ಎಂದು ಗುರುತಿಸಲಾಯಿತು. ನಿಪಿ 5 ಅಂಚೆ ಕವರ್‌ನಲ್ಲಿರುವ ವಿಳಾಸ ನನ್ನದೇ ಆಗಿರುತ್ತದೆ. ನಿಪಿ 5ನ್ನು ಪಡೆದುಕೊಳ್ಳದೇ ಅದನ್ನು ಹಿಂದುರುಗಿಸಿರುತ್ತೇನೆಂದರೆ ಸರಿಯಲ್ಲ. ವಾಹನದ ಮೂಲ ದಾಖಲೆಗಳನ್ನು ಪಡೆದುಕೊಳ್ಳುವ ಜವಾಬ್ದಾರಿ ನನ್ನದು ಎಂದರೆ ಸರಿ. ವಾಹನ ನೊಂದಣಿ ಮಾಡಿಕೊಳ್ಳುವ ಜವಾಬ್ದಾರಿ ನನ್ನದು ಆಗಿತ್ತು ಎಂದರೆ ಸರಿಯಲ್ಲ. ನನ್ನ ವಾಹನವನ್ನು ನೊಂದಣಿ ಮಾಡಿಕೊಡಿ ಎಂದು ಪ್ರೇರಣಾ ಮೋಟಾರ್ಸ್‌ರವರ ಬಳಿ ವಾಹನ ಬಂದ ಒಂದು ವಾರದಲ್ಲಿಯೇ ಕೇಳಿದ್ದೇನು. ಯಾವ ದಿನಾಂಕ ಗೊತ್ತಿಲ್ಲ ಆದರೆ 2013ರಲ್ಲಿ ಕೇಳಿದ್ದೇನು. ನಾನು ಪ್ರೇರಣಾ ಶೋರೂಂರವರ ಬಳಿ ವಾಹನ ನೊಂದಣಿಯ ಬಗ್ಗೆ ವಿಚಾರಿಸಿದೆನು ಅವರು ನೊಂದಣಿ ಮಾಡಿಕೊಡುತ್ತೇವೆಂದು ನನಗೆ ತಿಳಿಸಿದರು. ಪ್ರೇರಣಾ ಶೋರೂಂರವರು ನನ್ನ ವಾಹನ ನೊಂದಣಿ ಮಾಡಿಕೊಟ್ಟಿರುವುದಿಲ್ಲ. ಆ ಸಂಬಂಧವಾಗಿ ನಾನು ಯಾವುದೇ ಕ್ರಮ ಅವರ ವಿರುದ್ಧ ತೆಗೆದುಕೊಳ್ಳಲಿಲ್ಲ.

ನಾನು ಪಿರ್ಯಾದುದಾರರಿಗೆ ನೀಡಿದ 9 ಚೆಕ್ಕುಗಳ ಸಂಖ್ಯೆ ಹೇಳಲು ಆಗುವುದಿಲ್ಲ. ನನ್ನಿಂದ ಯಾವ ಖಾಲಿ ದಾಖಲೆಗಳಿಗೆ ಪಿರ್ಯಾದುದಾರರು ಸಹಿ ಮಾಡಿಸಿಕೊಂಡರು ನನಗೆ ಹೇಳಲು ಆಗುವುದಿಲ್ಲ. ಯಾವುದೇ ವ್ಯವಹಾರ ಮಾಡುವ ಸಮಯದಲ್ಲಿ ಯಾರಾದರೂ ಖಾಲಿ ದಾಖಲೆಗೆ ಸಹಿ ಮಾಡಿ ಎಂದು ನನಗೆ ಕೊಟ್ಟಾಗ ನಾನು ಅದಕ್ಕೆ ಸಹಿ ಮಾಡುವುದಿಲ್ಲ. ವಾಹನ ನನ್ನ ಬಳಿ ಬಂದ 1 ತಿಂಗಳ ನಂತರ ಪಿರ್ಯಾದುದಾರರು ನನ್ನ ವಾಹನವನ್ನು ತೆಗೆದುಕೊಂಡು ಹೋದರು. 2013ರಲ್ಲಿ ನನ್ನ ವಾಹನವನ್ನು ತೆಗೆದುಕೊಂಡು ಹೋಗಿರುತ್ತಾರೆ ಆದರೆ ದಿನಾಂಕ ನನಗೆ ನೆನಪು ಇಲ್ಲ. ನನ್ನ ವಾಹನವನ್ನು ಟಾಟಾ ಮೋಟಾರ್ಸ್ ಫೈನಾನ್ಸ್‌ನವರು ಎಂದು ಹೇಳಿ ತೆಗೆದುಕೊಂಡು ಹೋದರು. ಆ ಸಮಯದಲ್ಲಿ ಅವರ ಐಡಿ ಪ್ರೂಫ್‌ನ್ನು ತೋರಿಸಿರುತ್ತಾರೆ. ಆದರೆ ಸದರಿ ವ್ಯಕ್ತಿಯ ಹೆಸರು ಏನು ಎನ್ನುವುದು ನನಗೆ ಗೊತ್ತಿಲ್ಲ. ವಾಹನ ಈಗಲೂ ನನ್ನ ಬಳಿಯೇ ಇದೆ ಎಂದರೆ ಸರಿಯಲ್ಲ. ವಾಹನವನ್ನು ನನ್ನಿಂದ ವಶಪಡಿಸಿಕೊಂಡು ಹೋದಾಗ ನನಗೆ ಯಾವುದೇ ಹಿಂಬರಹ ನೀಡಿರುವುದಿಲ್ಲ. ಯಾರಾದರೂ ವ್ಯಕ್ತಿ ನಾವು ಟಾಟಾ ಮೋಟಾರ್ಸ್ ಫೈನಾನ್ಸ್‌ರವರು ಎಂದು ಹೇಳಿದ ತಕ್ಷಣ ವಾಹನವನ್ನು ಅವರಿಗೆ ಕೊಡುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನಗೆ ಐಡಿ ಕಾರ್ಡನ್ನು ತೋರಿಸಿದ ಕಾರಣ ನಾನು ವಾಹನವನ್ನು ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ಅವರ ಐಡಿ ಕಾರ್ಡ್‌ನಲ್ಲಿ ಟಿಎಟಿಎ ಎನ್ನುವ 4 ಅಕ್ಷರವನ್ನು ಮಾತ್ರ ನಾನು ಗುರುತಿಸಿದೆನು. ನನ್ನ ವಾಹನವನ್ನು ವಶಪಡಿಸಿಕೊಂಡ 15 ದಿನದ ನಂತರ ನನ್ನ ವಾಹನಕ್ಕೆ ಸಂಬಂದಿಸಿದ ದಾಖಲೆಯನ್ನು ಹಿಂದಕ್ಕೆ ಕೊಡಿ ಎಂದು ನಾನು

ಪ್ರೇರಣಾ ಶೋರೂಂರವರ ಬಳಿ ನಾನು 2 ಬಾರಿ ಹೋಗಿದ್ದೇನು. ಆದರೆ ಅವರು ನನ್ನ ದಾಖಲಾತಿಗಳನ್ನು ಹಿಂದುರುಗಿಸಿರುವುದಿಲ್ಲ, ನನ್ನ ದಾಖಲಾತಿಗಳನ್ನು ಹಿಂದುರುಗಿಸಿರುವುದಿಲ್ಲ ಎಂದು ನಾನು ಅವರ ವಿರುದ್ದ ಪೋಲೀಸರಿಗೆ ದೂರನ್ನು ನೀಡಿರುವುದಿಲ್ಲ, ವಾಹನ ನನ್ನ ಬಳಿ ಈಗಲೂ ಇದ್ದು ವಿವಾದಿತ ಚೆಕ್ಕಿನ ಮೊತ್ತವನ್ನು ಕಟ್ಟಬೇಕಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ, ಪಿರ್ಯಾದುದಾರರ ಕಂಪನಿಗೆ ನಾನು ಸಾಲದ ಹಣವನ್ನು ಕಟ್ಟಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಅವರು ನನ್ನ ವಾಹನವನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದು ಹೇಳುತ್ತಾರೆ.

ಕೋರಿಕೆಯ ಮೇರೆಗೆ ಮುಂದಿನ ಪಾಟೀ ಸವಾಲು ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಒ ಹೇ ಕೇ ಸ ಇದೆ

XVII ASCJ & ACMM